# ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಪ್ರಶ್ನೆಪತ್ರಿಕೆ

## (KSRP-SI-2012) ಸಾಮಾನ್ಯ ಅಧ್ಯಯನ, ಪತ್ರಿಕೆ -1

## ಪ್ರಬಂಧ ಮತ್ತು ಭಾಷಾಂತರ

ಸಮಯ : 60 ನಿಮಿಷಗಳು | ಅಂಕಗಳು:50

1. ಕೆಳಕಂಡ ಯಾವುದಾದರೊಂದು ವಿಷಯದ ಬಗ್ಗೆ 600 ಪದಗಳಿಗೆ ಮೀರದಂತೆ ಪ್ರಬಂಧವೊಂದನ್ನು ಬರೆಯಿರಿ. ಪದ ಮಿತಿಯನ್ನು ಮೀರಿದರೆ ಅಂಕಗಳನ್ನು ಕಳೆಯಲಾಗುವುದು.

ಎ. ಪತ್ರಿಕಾ ಸ್ವಾತಂತ್ರ್ಯ - ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ಪತ್ರಿಕೆಗಳ ಮತ್ತು ಮಾಧ್ಯಮಗಳ ಪಾತ್ರ

ಬಿ. ಆಧುನಿಕ ಭಾರತದಲ್ಲಿ ಇಸ್ರೋನ ಪಾತ್ರ

ಸಿ. ಭಾರತ ದೇಶ, ಮೂರನೇ ಜಗತ್ತಿನ ದೇಶಗಳನ್ನು ಜಾಗತಿಕವಾಗಿ ಮುನ್ನಡೆಸಬಹುದೆ?

ಡಿ. ಭಾರತದ ಮೇಲೆ ಪಾಶ್ಚಿಮಾತ್ಯ ಸಂಸ್ಕೃತಿಯ ಆಕ್ರಮಣ

ಇ. ಆಧುನಿಕ ಕರ್ನಾಟಕವನ್ನು ರೂಪಿಸುವಲ್ಲಿ ಮಹಿಳೆಯರ ಪಾತ್ರ

ಎಫ್. ಕರ್ನಾಟಕ ಒಂದು ಮಾದರಿ ರಾಜ್ಯ

2. ಈ ಕೆಳಗಿನ ಪ್ಯಾರಾವನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ.

The power to forgive comes from ocmpassion. Forgiveness dissolves the compulsive need to prove ourselves right. It removes the indignation we feel at imagined injustice. If we do not learn to forgive, resentment will poison us. When we do not forgive, we carry double the burden, both of resentful thoughts of others injustice and hidden reality of our own injustice. Forgivness releases us from these bitter emotions.

Forgiveness means to compassionately and peacefully move forward with what is good, towards what is better. Forgiveness melts the hardness of other's heart. Our forgiveness, at first, may puzzle them. People may even think of us naive, but eventually they will appreciate and esteem this supreme act of our kindness. To forgive and forget is love in action. But we must learn to forgive ourselves, as well as others. Otherwise the process of releasing this burden neither begins nor progresses.

3. ಈ ಕೆಳಗಿನ ಕೆಳಗಿನ ಪ್ಯಾರಾವನ್ನು ಕನ್ನಡದಿಂದ ಆಂಗ್ಲ ಭಾಷೆಗೆ ಭಾಷಾಂತರಿಸಿ.

ಪರಿಶ್ರಮದ ವ್ಯಕ್ತಿ ಆಕರ್ಷಣೀಯ: 10 ಜನರು ಆಲಸ್ಯದಿಂದ ಕಾಲ ಕಳೆಯುತ್ತಿದ್ದರೆ ಅವರಲ್ಲೊಬ್ಬ ಶ್ರಮಪಟ್ಟು ಕೆಲಸ ನಿರ್ವಹಿಸುತ್ತಿದ್ದರೆ ಆ ವ್ಯಕ್ತಿ ಹೆಚ್ಚು ಆಕರ್ಷಣೀಯವಾಗಿ ಕಾಣುತ್ತಾನೆ. ಶ್ರಮವನ್ನು ನಂಬಿಕೊಂಡ ವ್ಯಕ್ತಿಗೆ ಬಿಡುವೆನ್ನುವುದೇ ಇರದು. ದಿನದ 24 ಗಂಟೆಗಳು ಆತನಿಗೆ ಸಾಲವು. ಶ್ರಮಿಸಲು ಆತ ಅಂಜುವುದಿಲ್ಲ. ರಜೆಗೆ ಪಟ್ಟು ಹಿಡಿದುಕೊಳ್ಳುವುದಿಲ್ಲ. ಹೀಗಾಗಿ ಮೇಲಾಧಿಕಾರಿ ಹೆಚ್ಚು ಜವಾಬ್ದಾರಿ ಕೆಲಸಗಳನ್ನು ಆತನಿಗೆ ವಹಿಸಲು ಇಚ್ಛಿಸುತ್ತಾರೆ. ಇಷ್ಟಾದರೂ ''ಎಲ್ಲಾ ಕೆಲಸವನ್ನು ನನಗೆ ಒಪ್ಪಿಸುತ್ತಾರಲ್ಲ'' ಎಂದು ಬೇಸರಿಸಿಕೊಳ್ಳುವುದಿಲ್ಲ. ಕೆಲಸ ನಿರ್ವಹಿಸುವುದನ್ನು ಆತ ದೈನಿಕ ಕ್ರಿಯೆ ಎದು ಭಾವಿಸುತ್ತಾನೆ. ಸಲ್ಲದ ವಿಷಯಗಳಿಗೆ ಆತ ಗಮನ ಕೊಡುವುದಿಲ್ಲವಾದ್ದರಿಂದ ಆತನ ಮನೋ ಲಹರಿಯು ಕ್ರಮಬದ್ಧವಾಗಿರುತ್ತದೆ. ಹೀಗಾಗಿ ಆತ ಹೆಚ್ಚು ಆಕರ್ಷಿತನಾಗಿ ಕಂಡು ಎಲ್ಲರ ಮೆಚ್ಚುಗೆಗೆ ಪಾತ್ರನಾಗುತ್ತಾನೆ.

ಮಾನಸಿಕ ಒತ್ತಡದಿಂದ ಮುಕ್ತಿ : ಇಷ್ಟಪಟ್ಟು ಕೆಲಸ ಮಾಡುವುದರಿಂದ ಮಾನಸಿಕವಾಗಿ ದಿವ್ಯಾನಂದ ಅನುಭವಿಸಬಹುದು. ನಮ್ಮ ಮೇಲೆ ನಮಗೆ ನಂಬಿಕೆ ಉಂಟಾಗಿ ನಮ್ಮ ತನವನ್ನು ನಾವೇ ಇಷ್ಟಪಡುವ ಮನಸ್ಥಿತಿ ಸೃಷ್ಟಿಯಾಗುತ್ತದೆ. ಇದು ನಮಗೆ ಅಪರಿಮಿತವಾದ ಆನಂದ ತೃಪ್ತಿಗೆ ಕಾರಣವಾಗುತ್ತದೆ. ಹೀಗೆ ಶ್ರಮ ಪಡುವುದರಿಂದ ನಾವು ಅನುಭವಿಸಬಹುದಾದ ಆನಂದ ನಮ್ಮ ಮನಸ್ಸಿನ ಎಲ್ಲಾ ಬಗೆಯ ಒತ್ತಡಗಳನ್ನು ದೂರವಾಗಿಸಿ ಮನಸ್ಸು ಹಗುರವಾಗುವಂತೆ ಮಾಡುತ್ತದೆ. ಮಾನಸಿಕ ಒತ್ತಡದಿಂದ ಮುಕ್ತವಾಗುವುದರಿಂದ ಬದುಕಿನ ಒಂದೊಂದು ಕ್ಷಣವೂ ಆಹ್ಲಾದಮಯವಾಗಿ ಕಾಣಲು ಸಾಧ್ಯ. ಈ ಮೂಲಕ ಜೀವನದ ಪ್ರೀತಿಯನ್ನು ಕಂಡುಕೊಂಡು ನಮ್ಮ ಗುರಿ ತಲುಪಲು ಸಾಧ್ಯ ಎನ್ನುವುದು ಅನುಭವ ವೇದ್ಯ.

# ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಪ್ರಶ್ನೆಪತ್ರಿಕೆ

# KSRP-SI-2012

ಅವಧಿ : 90 ನಿಮಿಷ **ಪತ್ರಿಕೆ – 2** ಅಂಕಗಳು : 150

1. **ಬ್ರಿಟಿಷ್ ಕಂಪನಿಗಳಿಗೆ ಯಾವ ಯುದ್ಧ ಭೂ ತೆರಿಗೆಯನ್ನು ವಸೂಲಿ ಮಾಡಲು ಅವಕಾಶ ಮಾಡಿಕೊಟ್ಟಿತು?**
   ಎ. ಪ್ಲಾಸಿ ಬಿ. ಬಕ್ಸಾರ್
   ಸಿ. ವಾಂಡಿವಾಶ್ ಡಿ. ಬೆಡಾರ್

2. **ಈ ಕೆಳಗೆ ಸೂಚಿಸಿರುವ ಯಾವ ವೈಸರಾಯ್ ಭಾರತದ ಅಧಿಪತಿಯಾಗಿ ವಿಕ್ಟೋರಿಯಾ ರಾಣಿಯನ್ನು ಗುರುತಿಸಲು 1877ರಲ್ಲಿ ಒಂದು ದರ್ಬಾರ್ ಅನ್ನು ಏರ್ಪಡಿಸಿದ್ದರು?**
   ಎ. ಲಾರ್ಡ್ ಲಿಟ್ಟನ್
   ಬಿ. ಲಾರ್ಡ್ ಲ್ಯಾಂಡ್ಸ್ಡೋನ್
   ಸಿ. ಲಾರ್ಡ್ ರಿಪ್ಪನ್
   ಡಿ. ಲಾರ್ಡ್ ಲಿನ್‌ಲಿತ್ಗೋ

3. **ಹನ್ನೆರಡನೆಯ ಶತಮಾನವು ಕರ್ನಾಟಕದಲ್ಲಿ ಹೊಸ ಚಳವಳಿಯ ನೇತಾರ ಮೊದಲು ಜೈನನಾಗಿದ್ದ ಬ್ರಾಹ್ಮಣನೊಬ್ಬ ವಹಿಸಿದ್ದ. ಇವನು ಓರ್ವ ಚಾಲುಕ್ಯ ಚಕ್ರವರ್ತಿಯ ಆಸ್ಥಾನದಲ್ಲಿ ಮಂತ್ರಿಯೂ ಆಗಿದ್ದ.**
   ಎ. ವಸಂತ ಬಿ. ಕೃಷ್ಣದೇವ
   ಸಿ. ಬಸವಣ್ಣ ಡಿ. ಕಣ್ವ

4. **"ವಿಜಯ ನಗರ" ಅಥವಾ ವಿಜಯನಗರ ಇದ್ದದ್ದು**
   ಎ. ಕಾವೇರಿ–ತುಂಗಭದ್ರಾ ದೋ ಅಬ್
   ಬಿ. ಕೃಷ್ಣಾ – ತುಂಗಭದ್ರಾ ದೋ ಅಬ್
   ಸಿ. ಕೃಷ್ಣಾ – ಕಾವೇರಿ ದೋ ಅಬ್
   ಡಿ. ಭೀಮಗಂಗಾ – ತುಂಗಭದ್ರಾ ದೋ ಅಬ್

5. **ತನ್ನ ಸಾಮ್ರಾಜ್ಯದಲ್ಲಿ ತಂಬಾಕನ್ನು ನಿಷೇದಿಸಿದ ಮೊಘಲ್ ಚಕ್ರವರ್ತಿ ಯಾರು?**
   ಎ. ಬಾಬರ್ ಬಿ. ಅಕ್ಬರ್
   ಸಿ. ಜಹಾಂಗೀರ್ ಡಿ. ಔರಂಗಜೇಬ್

6. **ಎ ಎಂಬ ವೃತ್ತದ ತ್ರಿಜ್ಯ 100 ಮತ್ತು ಅದರ ಪರಿಧಿಯು ಬಿ ಎಂಬ ವೃತ್ತದ ಪರಿಧಿಯ ಎರಡರಷ್ಟಿದೆ. ಬಿ ವೃತ್ತದ ತ್ರಿಜ್ಯ ಎಷ್ಟು?**
   ಎ. 10 ಬಿ. 10 ಸಿ. 20 ಡಿ. 50

7. **ಎರಡು ಪದಾರ್ಥಗಳ ಮಾರುವ ಬೆಲೆ ಸಮನಾಗಿದ್ದರೆ ಮತ್ತು ಎರಡೂ ವಸ್ತುಗಳ ಒಟ್ಟು ಬೆಲೆ ರೂ. 2,300/– ಆಗಿದ್ದರೆ ಮತ್ತು ಒಂದು ಪದಾರ್ಥವನ್ನು ಶೇ. 20ರ ಲಾಭಕ್ಕೆ ಮಾರಾಟ ಮಾಡಿದರೆ ಹಾಗೂ ಇನ್ನೊಂದನ್ನು ಶೇ. 10ರ ಲಾಭಕ್ಕೆ ಮಾರಾಟ ಮಾಡಿದರೆ ಶೇ. 20ರ ಲಾಭದಲ್ಲಿ ಮಾರಾಟ ಮಾಡಿದ ಪದಾರ್ಥದ ಮಾರಾಟದ ಬೆಲೆ ಕಂಡು ಹಿಡಿಯಿರಿ.**
   ಎ. ರೂ. 1,220/– ಬಿ. ರೂ. 1,320/–
   ಸಿ. ರೂ. 1,420/– ಡಿ. ರೂ. 1,520/–


8. **ಒಂದು ಪಾತ್ರೆಯಲ್ಲಿ ಹಾಲಿದ್ದು ಅದರಿಂದ 5 ಲೀಟರ್ ಹಾಲನ್ನು ತೆಗೆದು 5 ಲೀಟರು ನೀರನ್ನು ಸೇರಿಸಲಾಯಿತು. ಮಿಶ್ರಣದಲ್ಲಿ 5 ಲೀಟರ್ ಅನ್ನು ಪುನಃ ತೆಗೆದು ಮತ್ತೆ 5 ಲೀಟರು ನೀರನ್ನು ತುಂಬಲಾಯಿತು. ಈಗ ಹಾಲು ಮತ್ತು ನೀರಿನ ಅನುಪಾತ 25:11 ಮೊದಲು ಪಾತ್ರೆಯಲ್ಲಿ ಎಷ್ಟು ಹಾಲಿತ್ತೆಂದು ಕಂಡು ಹಿಡಿಯಿರಿ?**
   ಎ. 20 ಲೀಟರು ಬಿ. 25 ಲೀಟರು
   ಸಿ. 30 ಲೀಟರು ಡಿ. 35 ಲೀಟರು

9. **ಇಬ್ಬರು ನಡಿಗೆಯನ್ನು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಪ್ರಾರಂಭಿಸಿದರು. ಇಬ್ಬರೂ ಆರು ಮೈಲಿಗಳಷ್ಟು ದೂರ ನಡೆದರು. ನಂತರ ಬಲಕ್ಕೆ ತಿರುಗಿ ಪುನಃ ಎಂಟು ಮೈಲಿಗಳಷ್ಟು ದೂರ ನಡೆದರು. ಅವರಿಬ್ಬರೂ ಪ್ರಾರಂಭದ ಬಿಂದುವಿನಿಂದ ಎಷ್ಟು ದೂರದಲ್ಲಿದ್ದಾರೆ?**
   ಎ. 14 ಮೈಲಿಗಳು ಮತ್ತು 14 ಮೈಲಿಗಳು
   ಬಿ. 10 ಮೈಲಿಗಳು ಮತ್ತು 10 ಮೈಲಿಗಳು
   ಸಿ. 6 ಮೈಲಿಗಳು ಮತ್ತು 6 ಮೈಲಿಗಳು
   ಡಿ. 8 ಮೈಲಿಗಳು ಮತ್ತು 8 ಮೈಲಿಗಳು

10. **ಒಂದು ಸಂಖ್ಯೆಯನ್ನು 13ರಿಂದ ಗುಣಿಸಿದಾಗ ಬರುವ ಸಂಖ್ಯೆಯು ಈಗ ಮೂಲ ಸಂಖ್ಯೆಯು 105ಕ್ಕಿಂತ ಎಷ್ಟು ಕಡಿಮೆ ಇದೆಯೋ ಅಷ್ಟೇ ಪ್ರಮಾಣದಲ್ಲಿ 105ಕ್ಕಿಂತ ಹೆಚ್ಚಾಗಿರುತ್ತದೆ. ಆ ಸಂಖ್ಯೆ ಯಾವುದು?**

ಎ. 12 ಬಿ. 15 ಸಿ. 14 ಡಿ. 13

**11.** **ವೆಸ್ಟ್ ಮೋಟರ್ ಕಾರು ಕಂಪನಿಯು ತನ್ನ ಪ್ರತಿಗ್ರಾಹಕನನ್ನೂ ಸಮೀಕ್ಷೆ ಮಾಡಿ ಅವರು ಅಪೇಕ್ಷಿಸಿದ ಬಣ್ಣಗಳನ್ನು ಶೇಕಡಾವಾರು ಪ್ರಮಾಣದಲ್ಲಿ ಮುಂದೆ ಇರುವ ಚಿತ್ರದಲ್ಲಿ ದಾಖಲಿಸಿದ್ದಾರೆ. ಈಗ ಅವರು ಯಾರಾದರೊಬ್ಬ ಗ್ರಾಹಕನನ್ನು ಆಯ್ಕೆ ಮಾಡಬೇಕೆಂದರೆ ಕಪ್ಪು ಬಣ್ಣವನ್ನು ಅಪೇಕ್ಷಿಸಿದ ಗ್ರಾಹಕನ ಆಯ್ಕೆಯ ಸಂಭವನೀಯತೆ ಎಷ್ಟಿರುತ್ತದೆ?**





ಎ. 1/20
ಬಿ. 1/18
ಸಿ. 1/5
ಡಿ. 1/4

**12.** **ಒಂದು ವೇಳೆ ax + by = 14 ಮತ್ತು ax - by = 4 ಆದರೆ ಆಗ ಕೆಳಗಿನ ಯಾವುದು ನಿಜವಾಗಬೇಕಾಗುತ್ತದೆ?**


ಎ. ax = 5 ಬಿ. ax = 9
ಸಿ. by = 9 ಡಿ. by = 10

**13.** **ಕೆಳಗಿನ ಚಿತ್ರದಲ್ಲಿ ವೃತ್ತದ ಕೇಂದ್ರ ಮತ್ತು O ಸಮಬಾಹು ತ್ರಿಕೋನದ ಭುಜಗಳ ಮೊತ್ತ 18, ವೃತ್ತದ ವ್ಯಾಸ ಎಷ್ಟಿರುತ್ತದೆ?**




ಎ. 12
ಬಿ. 10
ಸಿ. 9
ಡಿ. 8

**14.** **ಕೆಳಗೆ ನೀಡಿರುವ ಚಿತ್ರದಲ್ಲಿ ಬಣ್ಣ ತುಂಬಿರುವ ಪ್ರದೇಶದ ವಿಸ್ತೀರ್ಣ ಎಷ್ಟು?**



ಎ. 30
ಬಿ. 21
ಸಿ. 18
ಡಿ. 12

**15.** **ಇಂದು ಭಾನುವಾರವಾದರೆ ಇಂದಿಗೆ ಐವತ್ತು ದಿನಗಳ ನಂತರದ ದಿನ ಯಾವ ದಿನವಾಗಿರುತ್ತದೆ?**

ಎ. ಭಾನುವಾರ ಬಿ. ಸೋಮವಾರ
ಸಿ. ಮಂಗಳವಾರ ಡಿ. ಬುಧವಾರ

**16.** **ಟಿಪ್ಪು ಕೊಚ್ಚಿ ರಾಜ್ಯವನ್ನು ತನ್ನ ಅಧೀನ ರಾಜ್ಯವೆಂದು ಪರಿಗಣಿಸಿದ್ದನು. ಅದುದರಿಂದ ತಿರುವಾಂಕೂರು ರಾಜನ ಕಾರ್ಯವು (ನಿಯಮವು) ತನ್ನ ಸ್ವಾತಂತ್ರ್ಯದ ಹಕ್ಕುಗಳಿಗೆ ವಿರೋಧವಾಗಿದೆಯೆಂದು ಪರಿಗಣಿಸಿದನು. ಏಪ್ರಿಲ್ 1790 ರಲ್ಲಿ ಅವನು ತಿರುವಾಂಕೂರಿನ ಮೇಲೆ ದಾಳಿ ನಡೆಸಲು ತೀರ್ಮಾನಿಸಿದನು. ಯುದ್ಧಕ್ಕಾಗಿ ಪರಿತಪಿಸುತ್ತಿದ್ದ ಇಂಗ್ಲಿಷಿನವರು ತಿರುವಾಂಕೂರು ರಾಜನ ಪರ ವಹಿಸಿಕೊಂಡು ಟಿಪ್ಪುವಿನ ಮೇಲೆ ಯುದ್ಧವನ್ನು ಘೋಷಿಸಿದರು. ಇದು ಈ ಕೆಳಗಿನವುಗಳ ಹಾಗೆ ಪರ್ಯಾವಸ್ಥಾನವಾಯಿತು.**

ಎ. ಮೊದಲನೆಯ ಆಂಗ್ಲ – ಮೈಸೂರು ಯುದ್ಧ
ಬಿ. ಎರಡನೇಯ ಆಂಗ್ಲ – ಮೈಸೂರು ಯುದ್ಧ
ಸಿ. ಮೂರನೆಯ ಆಂಗ್ಲ – ಮೈಸೂರು ಯುದ್ಧ
ಡಿ. ನಾಲ್ಕನೆಯ ಆಂಗ್ಲ – ಮೈಸೂರು ಯುದ್ಧ

**17.** **ಬೆಂಟಿಂಕನು ಸಮಾಜದ ಸುಧಾರಣೆ ಮಾಡಲು ಇವುಗಳ ಮೂಲಕ ಪ್ರಯತ್ನಿಸಿದನು.**

ಎ. ಸತಿ ಪದ್ದತಿಯಂತಹ ಕ್ರೂರ ಆಚರಣೆಗಳನ್ನು ರದ್ದುಗೊಳಿಸಿದನು.
ಬಿ. ಶಿಶು ಹತ್ಯೆಯನ್ನು ತಡೆಗಟ್ಟಿದನು.
ಸಿ. ಕಾಳಿದೇವಿಗೆ ಬಲಿಕೊಡುವುದನ್ನು ತಪ್ಪಿಸಿದನು.
ಡಿ. ಸಾರ್ವಜನಿಕ ಸೇವೆಗಳ ನೇಮಕಾತಿಯಲ್ಲಿ ಹೀನಾಯ ಭೇದಗಳನ್ನು ತೊಡೆದು ಹಾಕಿದನು.

ಸರಿಯಾದುದನ್ನು ಆಯ್ಕೆ ಮಾಡಿ:

ಎ. 1, 2 ಮತ್ತು 3 ಮಾತ್ರ
ಬಿ. 1, 2 ಮತ್ತು 4 ಮಾತ್ರ
ಸಿ. 2, 3 ಮತ್ತು 4 ಮಾತ್ರ
ಡಿ. ಎಲ್ಲವೂ

**18.** **ಭಾರತದ ರಾಷ್ಟ್ರಗೀತೆಯಾಗಿದ್ದ ವಂದೇ ಮಾತರಂ ಯಾವ ಕಾದಂಬರಿಯಲ್ಲಿದೆ?**

ಎ. ವಿಜಯ್ ರಾಜ್ ಅವರ ರಾಗ ವಿನೋದ
ಬಿ. ಅಮೀರ್ ಖುಸ್ರೋ ರಚಿಸಿದ ಸಬಕ್–ಇ–ಹಿಂದ್
ಸಿ. ಬಂಕಿಮಚಂದ್ರ ಚಟರ್ಜಿಯವರ ಆನಂದಮಠ
ಡಿ. ಶರತ್ ಚಂದ್ರ ಚಟರ್ಜಿಯವರ ಪಥೇರ್ ದೇವಿ

**19.** **ದಕ್ಷಿಣ ಬಸಾಲ್ಟ್ ಶಿಲೆಯು ಈ ಕೆಳಗಿನ ಯಾವ ಶಿಲಾ ವ್ಯವಸ್ಥೆಯಿಂದ ರೂಪುಗೊಂಡಿದೆ?**

ಎ. ಪ್ರಾಥಮಿಕ ಶಿಲಾ ವ್ಯವಸ್ಥೆ
ಬಿ. ಪುರಾಣ ಶಿಲಾ ವ್ಯವಸ್ಥೆ
ಸಿ. ದ್ರಾವಿಡ ಶಿಲಾ ವ್ಯವಸ್ಥೆ
ಡಿ. ಆರ್ಯನ್ ಶಿಲಾ ವ್ಯವಸ್ಥೆ

**20.** **ಅಂತರ್ ರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯವು ಯುದ್ಧಾಪರಾಧಗಳಿಗೆ ಸಂಬಂಧಿಸಿದಂತೆ ಮೊದಲ ಶಾಶ್ವತ ಯುದ್ಧಾಪರಾಧ ನ್ಯಾಯಮಂಡಳಿ. ಅದರ ಪ್ರಧಾನ ಕಛೇರಿ ಎಲ್ಲಿದೆ?**

ಎ. ನೆದರ್ ಲ್ಯಾಂಡ್ ಬಿ. ಸ್ಕಾಟ್ ಲ್ಯಾಂಡ್

ಸಿ. ಡೆನ್ಮಾರ್ಕ್ ಡಿ. ಅಮೆರಿಕಾ

**21. ಕರ್ನಾಟಕದ ಯಾವ ಸ್ಥಳದಲ್ಲಿ ಯುರೇನಿಯಂ ಗಣಿಗಾರಿಕೆಗೆ ಅನುಮತಿ ದೊರೆತಿದೆ?**

ಎ. ಅಥಣಿ ಬಿ. ಗೋಗಿ

ಸಿ. ಗುಂಡ್ಲುಪೇಟೆ ಡಿ. ಅಂಕೋಲ

**22. ಈ ಕೆಳಗೆ ಸೂಚಿಸಿರುವ ಗ್ರಹಗಳನ್ನು ಗಮನಿಸಿ:**

1. ಬುಧ 2. ಶುಕ್ರ

3. ಮಂಗಳ 4. ಶನಿ 5. ಗುರು

ಈ ಪೈಕಿ ಯಾವ ಗುಂಪಿನ ಗ್ರಹಗಳು ಪ್ರಾಚೀನ ಕಾಲದಿಂದ ನಮಗೆ ತಿಳಿದಿವೆ?

ಎ. 1, 2, 3 ಮತ್ತು 4

ಬಿ. 1, 3, 4 ಮತ್ತು 5

ಸಿ. 2, 3, 4 ಮತ್ತು 5

ಡಿ. ಮೇಲಿನ ಎಲ್ಲವೂ

**23. ಅಗ್ನಿ ಶಾಮಕ ದಳದವರ ಸಮವಸ್ತ್ರವು ಯಾವ ಬಗೆಯ ಪ್ಲಾಸ್ಟಿಕ್‌ನಿಂದ ಕೂಡಿರುತ್ತದೆ?**

ಎ. ಟೆಫ್ಲಾನ್ ಬಿ. ಬೇಕ್‌ಲೈಟ್

ಸಿ. ಮೆಲಾಮಿನ್ ಡಿ. ಪಿವಿಸಿ

**24. ಈ ಕೆಳಗಿನ ಆಲೋಹಗಳ ಪೈಕಿ ಯಾವುದು ಮುಕ್ತಗಾಳಿಯಲ್ಲಿ ಹೆಚ್ಚು ಕ್ರಿಯಾಶಾಲಿಯಾಗಿರುತ್ತದೆ?**

ಎ. ಇಂಗಾಲ ಬಿ. ಗಂಧಕ

ಸಿ. ರಂಜಕ ಡಿ. ಗ್ರಾಫೈಟ್

**25. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ**

1. ಅರ್ಗಾನ್ ಮತ್ತು ನಿಯಾನ್‌ಗಳನ್ನು ವಿದ್ಯುದ್ದೀಪಗಳನ್ನು ತುಂಬಿಸುತ್ತಾರೆ.
2. ಹೀಲಿಯಂ ಅನ್ನು ಬಲೂನುಗಳಲ್ಲಿ ತುಂಬಿಸುತ್ತಾರೆ.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ/ಗಳು

ಎ. 1 ಮಾತ್ರ ಬಿ. 2 ಮಾತ್ರ

ಸಿ. 1 ಮತ್ತು 2 ಎರಡೂ

ಡಿ. ಯಾವುದೂ ಅಲ್ಲ

**26. ಈ ಕೆಳಗಿನವುಗಳ ಪೈಕಿ ಬಾಲಗಂಗಾಧರ ತಿಲಕರು ಪ್ರಕಟಿಸುತ್ತಿದ್ದ ಪತ್ರಿಕೆ ಯಾವುದು?**

ಎ. ಯಂಗ್ ಇಂಡಿಯಾ ಬಿ. ಕೇಸರಿ

ಸಿ. ಕಾಮ್ರೇಡ್ ಡಿ. ಅಲ್‌ಹಿಲಾಲ್

**27. 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಯಾರು ವಹಿಸಿದ್ದರು?**

ಎ. ಪಂಡಿತ್ ಜವಹರಲಾಲ್ ನೆಹರು

ಬಿ. ಮಹಾತ್ಮಾಗಾಂಧಿ

ಸಿ. ಕೆಂಗಲ್ ಹನುಮಂತಯ್ಯ

ಡಿ. ಬಾಲಗಂಗಾಧರ ತಿಲಕ್

**28. ಬಿ. ಆರ್. ಅಂಬೇಡ್ಕರ್ ಅವರು ಸಂಸತ್ತಿಗೆ ಎಲ್ಲಿಂದ ಆಯ್ಕೆಯಾದರು?**

ಎ. ಪಶ್ಚಿಮ ಬಂಗಾಳ ಬಿ. ಬಾಂಬೆ ಪ್ರೆಸಿಡೆನ್ಸಿ

ಸಿ. ಸೆಂಟ್ರಲ್ ಫ್ರಾವಿನ್ಸ್ ಡಿ. ಪಂಜಾಬ್

**29. ರಾಜ್ಯದ ಮುಖ್ಯಮಂತ್ರಿಗಳು ಭಾರತದ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಮತದಾನ ಮಾಡಲು ಕೆಳಕಂಡ ಸಂದರ್ಭದಲ್ಲಿ ಅರ್ಹರಾಗುವುದಿಲ್ಲ**

ಎ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾಗ

ಬಿ. ವಿಧಾನಸಭೆಯಲ್ಲಿ ಇನ್ನೂ ಬಹುಬಲವನ್ನು ಸಾಬೀತು ಮಾಡದಿದ್ದಾಗ

ಸಿ. ಅವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾಗ

ಡಿ. ಹಂಗಾಮಿ ಮುಖ್ಯಮಂತ್ರಿಗಳಾಗಿದ್ದಾಗ

**30. ಪಟ್ಟಿ ಒಂದರಲ್ಲಿರುವ ಸಂಗತಿಗಳೊಂದಿಗೆ ಪಟ್ಟಿ ಎರಡರಲ್ಲಿರುವ ಸಂಗತಿಗಳನ್ನು ಹೊಂದಿಸಿ.**

| | ಪಟ್ಟಿ–1 | ಪಟ್ಟಿ–2 |
|---|---|---|
| ಎ. | ಚಾರು ಮಜುಮ್‌ದಾರ್ | 1. ಗಾಂಧಿವಾದಿ |
| ಬಿ. | ಜಯಪ್ರಕಾಶ್ ನಾರಾಯಣ್ | 2. ತುರ್ತುಪರಿಸ್ಥಿತಿ |
| ಸಿ. | ಷಾ ಕಮಿಷನ್ | 3. ಸಿ ಪಿ ಐ (ಎಂ) |
| ಡಿ. | ಮೊರಾರ್ಜಿ ದೇಸಾಯಿ | 4. ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ |

**ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ. | 3 | 4 | 2 | 1 |
| ಬಿ. | 3 | 2 | 1 | 4 |
| ಸಿ. | 2 | 1 | 4 | 3 |
| ಡಿ. | 2 | 3 | 4 | 1 |

**31. ನನ್ನ ಉತ್ತರಾಧಿಕಾರಿಯು ನನ್ನ ತಂದೆಯ ಮಗ ಮತ್ತು ನನಗೆ ಸೋದರರಾಗಲೀ ಮಗನಾಗಲೀ ಇಲ್ಲ. ನನ್ನ ಉತ್ತರಾಧಿಕಾರಿ ಯಾರು?**

ಎ. ಸೋದರ/ರಿ ಮಗ

ಬಿ. ಸೋದರ/ರಿ ಮಗಳು

ಸಿ. ಮಗಳು ಡಿ. ನಾನೇ

**32. ಮೊದಲನೆಯ ಆಕಾರವನ್ನು ಮಡಿಕೆ ಮಾಡುವುದರಿಂದ ಕೆಳಗೆ ಇರುವ ಚಿತ್ರಗಳ ಪೈಕಿ ಯಾವ ಚಿತ್ರವನ್ನು ಪಡೆಯಬಹುದು?**